# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1396
2. ಸದಸ್ಯರ ಹೆಸರು : ಶ್ರೀ ಎನ್.ಅಪ್ಪಾಜಿಗೌಡ
3. ಉತ್ತರಿಸಬೇಕಾದ ದಿನಾಂಕ : 16.03.2021
4. ಉತ್ತರಿಸುವ ಸಚಿವರು : ಸಹಕಾರ ಸಚಿವರು.

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ | ಮಂಡ್ಯ ಜಿಲ್ಲೆ ವ್ಯಾಪ್ತಿಯಲ್ಲಿ ರೈತರಿಂದ ನೇರವಾಗಿ ಭತ್ತ, ರಾಗಿ ಖರೀದಿ ಮಾಡಲು ಎಷ್ಟು ಖರೀದಿ ಕೇಂದ್ರಗಳನ್ನು ತೆರೆಯಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು) | 2020–21 ಸಾಲಿನ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಮಂಡ್ಯ ಜಿಲ್ಲೆಯಲ್ಲಿ ತೆರೆಯಲಾಗಿರುವ ಖರೀದಿ ಕೇಂದ್ರಗಳ ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ: (see table below) ಪಿಎಸಿಎಸ್/ವಿಎಸ್ಎಸ್ಎನ್‌ಗಳ ಹಂತದಲ್ಲಿ ಖರೀದಿ ಕೇಂದ್ರಗಳನ್ನು ತೆರೆದು ರಾಗಿ ಖರೀದಿಸಲು ಕ್ರಮವಹಿಸಲಾಗಿದೆ. |
| ಆ | ನಾಗಮಂಗಲ ತಾಲ್ಲೂಕು ಎ.ಪಿ.ಎಂ.ಸಿ ಆವರಣದಲ್ಲಿ ರಾಗಿ ಖರೀದಿ ಕೇಂದ್ರದಲ್ಲಿ ಅಧಿಕಾರಿಗಳು ರೈತರಿಗೆ ಸರಿಯಾಗಿ ಸ್ಪಂದಿಸುತ್ತಿಲ್ಲ ಹಾಗೂ ರಾಗಿ ಖರೀದಿ ಕೇಂದ್ರಕ್ಕೆ ಬರುವ ರೈತರಿಗೆ ಮೂಲಭೂತ ಸೌಲಭ್ಯ (ಕುಡಿಯುವ ನೀರು ಮತ್ತು ಶೌಚಾಲಯ) ಕಲ್ಪಿಸಿಲ್ಲವೆಂದು ಪ್ರತಿಭಟನೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಅವ್ಯವಸ್ಥೆ ಸರಿಪಡಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ ; (ವಿವರ ನೀಡುವುದು) | **ಆಹಾರ, ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾರಗಳ ಮತ್ತು ಕಾನೂನು ಮಾಪನಶಾಸ್ತ್ರ ಇಲಾಖೆಗೆ** ಸಂಬಂಧಿಸಿದಂತೆ ಮೂಲಭೂತ ಸೌಲಭ್ಯಗಳ ಕುರಿತು ಪ್ರತಿಭಟನೆ ನಡೆದಿರುವ ಬಗ್ಗೆ ದೂರುಗಳು ಬಂದಿರುತ್ತದೆ. ಅಗತ್ಯ ಮೂಲ ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ ಹಾಗೂ ರಾಗಿ ಖರೀದಿ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಧಿಕಾರಿಯನ್ನು ಈಗಾಗಲೇ ವರ್ಗಾವಣೆ ಮಾಡಿ ಬೇರೆ ಅಧಿಕಾರಿಯನ್ನು ನಿಯೋಜಿಸಿ ಕ್ರಮ ಕೈಗೊಳ್ಳಲಾಗಿರುತ್ತದೆ.<br><br>**ಕೃಷಿ ಮಾರಾಟ ಇಲಾಖೆಗೆ** ಸಂಬಂಧಿಸಿದಂತೆ ಮೂಲಭೂತ ಸೌಲಭ್ಯಗಳ ಬಗ್ಗೆ ಪ್ರತಿಭಟನೆ ನಡೆದಿರುವ ಬಗ್ಗೆ ದೂರುಗಳು ಬಂದಿರುವುದಿಲ್ಲ. ಆದಾಗ್ಯೂ ನಾಗಮಂಗಲ ಎ.ಪಿ.ಎಂ.ಸಿ. ಆವರಣದಲ್ಲಿ 3 ಕುಡಿಯುವ ನೀರಿನ ಘಟಕಗಳು ಕಾರ್ಯನಿರ್ವಹಿಸುತ್ತಿರುತ್ತವೆ ಹಾಗೂ ಪುರುಷರಿಗೆ ಮತ್ತು ಮಹಿಳೆಯರಿಗಾಗಿ ಪ್ರತ್ಯೇಕವಾದ ಶೌಚಾಲಯದ ವ್ಯವಸ್ಥೆ ಸಹ ಮಾಡಿಕೊಡಲಾಗಿದೆ. |

| ಕ್ರ ಸಂ | ತಾಲ್ಲೂಕು | ಭತ್ತ ಖರೀದಿಗೆ ಭಾಗವಹಿಸಿರುವ ಅಕ್ಕಿ ಗಿರಣಿಗಳ ಸಂಖ್ಯೆ | ರಾಗಿ ಖರೀದಿಗೆ ತೆರೆಯಲಾಗಿರುವ ಖರೀದಿ ಕೇಂದ್ರಗಳ ಸಂಖ್ಯೆ |
|---|---|---|---|
| 1 | ಕೆ.ಆರ್ ಪೇಟೆ | 7 | 4 |
| 2 | ಮದ್ದೂರು | 15 | 4 |
| 3 | ಮಳವಳ್ಳಿ | 10 | 4 |
| 4 | ಮಂಡ್ಯ | 36 | 6 |
| 5 | ನಾಗಮಂಗಲ | 01 | 3 |
| 6 | ಪಾಂಡವಪುರ | 04 | 4 |
| 7 | ಶ್ರೀರಂಗಪಟ್ಟಣ | 13 | 1 |
| | **ಒಟ್ಟು** | **86** | **26** |

| | | |
|---|---|---|
| ಇ | ನಾಗಮಂಗಲ ರಾಗಿ ಖರೀದಿ ಕೇಂದ್ರದಲ್ಲಿ ಎ.ಪಿ.ಎಂ.ಸಿ.ಯ ತೂಕದ ಯಂತ್ರ ಕೆಟ್ಟಿದ್ದು, ಇದರಿಂದ ಖರೀದಿ ಕೇಂದ್ರಕ್ಕೆ ಬಂದ ರೈತರಿಗೆ ಆಗಿರುವ ಅನಾನುಕೂಲ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ ಈ ಸಂಬಂಧ ಯಾವ ಕ್ರಮ ಕೈಗೊಳ್ಳಲಾಗಿದೆ (ವಿವರ ನೀಡುವುದು) | ನಾಗಮಮಂಗಲ ಎ.ಪಿ.ಎಂ.ಸಿ.ಯ ರಾಗಿ ಖರೀದಿ ಕೇಂದ್ರದಲ್ಲಿ ತೂಕದ ಯಂತ್ರ ಒಂದು ದಿನ ಮಾತ್ರ ಅಂದರೆ ದಿನಾಂಕ: 22.02.2021ರಂದು ಕಂಪ್ಯೂಟರ್ ತಾಂತ್ರಿಕ ದೋಷದಿಂದಾಗಿ ಕಾರ್ಯನಿರ್ವಹಿಸಿರುವುದಿಲ್ಲ. ಸದರಿ ಕಂಪ್ಯೂಟರ್‌ನ್ನು ತುರ್ತಾಗಿ ಅಂದೇ ದುರಸ್ಥಿಗೊಳಿಸಲಾಗಿರುತ್ತದೆ.<br><br>ಪ್ರಸ್ತುತ ನಾಗಮಂಗಲ ಎ.ಪಿ.ಎಂ.ಸಿ.ಯ ರಾಗಿ ಖರೀದಿ ಕೇಂದ್ರದಲ್ಲಿ ತೂಕದ ಯಂತ್ರ ವ್ಯವಸ್ಥಿತವಾಗಿ ಕಾರ್ಯನಿರ್ವಹಿಸುತ್ತಿದ್ದು, ಖರೀದಿ ಕೇಂದ್ರಕ್ಕೆ ಬರುವ ರೈತರು ಮತ್ತು ವರ್ತಕರು ಇದರ ಸದುಪಯೋಗವನ್ನು ಪಡೆದುಕೊಳ್ಳುತ್ತಿರುತ್ತಾರೆ. ಆದ್ದರಿಂದ ರೈತರಿಗೆ ಯಾವುದೇ ಅನಾನುಕೂಲ ಆಗಿರುವುದಿಲ್ಲ. |
| ಈ | ನಾಗಮಂಗಲ ಎ.ಪಿ.ಎಂ.ಸಿ. ಆವರಣದಲ್ಲಿ ಹೊಸದಾಗಿ ನಿರ್ಮಿಸಿರುವ ಶೌಚಾಲಯ, ತೂಕದ ಯಂತ್ರ, ಕುಡಿಯುವ ನೀರಿನ ವ್ಯವಸ್ಥೆ ಈ ಸಂಬಂಧ ಕಳಪೆ ಕಾಮಗಾರಿ ಮಾಡಿರುವ ಗುತ್ತಿಗೆದಾರರು ಮತ್ತು ಅಧಿಕಾರಿ ವರ್ಗದವರ ವಿರುದ್ಧ ಯಾವ ಕ್ರಮಕೈಗೊಳ್ಳಲಾಗಿದೆ? (ವಿವರ ನೀಡುವುದು) | ನಾಗಮಂಗಲ ಎ.ಪಿ.ಎಂ.ಸಿ. ಯಲ್ಲಿ ವೇ-ಬ್ರಿಡ್ಜ್ ನಿರ್ಮಾಣದ ಕಾಮಗಾರಿ ಕಳಪೆಯಾಗಿರುವುದಾಗಿ ದೂರು ಬಂದಿರುತ್ತದೆ.<br><br>ಸದರಿ ದೂರಿನ ಸಂಬಂಧ ಕಾರ್ಯನಿರ್ವಾಹಕ ಅಭಿಯಂತರರು, ಮಾರುಕಟ್ಟೆ ಅಭಿವೃದ್ಧಿ ಯೋಜನೆ ಮೈಸೂರು ವಿಭಾಗ ಮತ್ತು 3ನೇ ಭಾಗೀದಾರರ ಸಂಸ್ಥೆಯಾದ ಮೆ: ಸ್ವಸ್ತಿಕ್ ಸಿವಿಲ್ ಇಂಜಿನಿಯರಿಂಗ್ ಲ್ಯಾಬ್, ಮೈಸೂರು ಸಂಸ್ಥೆಯಿಂದ ಪರಿವೀಕ್ಷಣೆ ನಡೆಸಿ ಗುಣಮಟ್ಟದ ಬಗ್ಗೆ ವರದಿ ಪಡೆದಿದ್ದು, ವೇ-ಬ್ರಿಡ್ಜ್ ಕಾಮಗಾರಿಯು ಸುಸ್ಥಿತಿಯಲ್ಲಿ ಕಾರ್ಯನಿರ್ವಹಿಸುತ್ತಿರುವುದಾಗಿ ವರದಿ ನೀಡಿರುತ್ತಾರೆ ಹಾಗೂ ಇತರೆ ಕಾಮಗಾರಿಗಳು ಸಹ ಗುಣಮಟ್ಟದಿಂದ ಕೂಡಿರುವುದಾಗಿ ವರದಿ ನೀಡಿರುತ್ತಾರೆ.<br><br>ದಿನಾಂಕ:02.03.2021ರಂದು ನಾಗಮಂಗಲ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ ಇವರು ಭೇಟಿ ನೀಡಿ ಸರಿಯಾಗಿ ವೇ-ಬ್ರಿಡ್ಜ್ ಯಂತ್ರವು ಕಾರ್ಯನಿರ್ವಹಿಸುತ್ತಿರುವುದನ್ನು, ಲಾರಿ, ಟ್ರಾಕ್ಟರ್ ಮತ್ತು ಲಘು ಗೂಡ್ಸ್ ವಾಹನಗಳಲ್ಲಿ ರೈತರು ತರುವ ಧಾನ್ಯಗಳನ್ನು ವೇ-ಬ್ರಿಡ್ಜ್ ಯಂತ್ರದಲ್ಲಿ ಮಾಪನ ಮಾಡುತ್ತಿರುವುದನ್ನು ಗಮನಿಸಿರುತ್ತಾರೆ. ದಿನಾಂಕ: 01.03.2021ರ ಅಂತ್ಯದವರೆಗೆ ಒಟ್ಟು 4821 ಸಂಖ್ಯೆ ವಾಹನಗಳು ಮಾಪನ ಪ್ರಕ್ರಿಯೆಗೆ ಒಳಪಟ್ಟಿದ್ದು, ಇದರಿಂದ ಒಟ್ಟು ರೂ.2,45,348/- ಮೊತ್ತದ ಶುಲ್ಕವು ಸಂಗ್ರಹವಾಗಿರುತ್ತದೆ. ಈ ಪ್ರಯುಕ್ತ ಯಾರ ವಿರುದ್ಧವೂ ಕ್ರಮಕೈಗೊಳ್ಳುವ ಪ್ರಶ್ನೆ ಉದ್ಭವಿಸಿರುವುದಿಲ್ಲ. |

**ಸಂಖ್ಯೆ:ಸಿಒ 98 ಎಂಆರ್‌ಇ 2021**

(ಎಸ್.ಟಿ.ಸೋಮಶೇಖರ್)
**ಸಹಕಾರ ಸಚಿವರು**